| 1 | 2 | 3 | 4 | 5 |
|---|---|---|---|---|
| 19. | ಬಾಗಲಕೋಟಿ | -- | -- | -- |
| 20. | ಧಾರವಾಡ | 03 | -- | 3 |
| 21. | ಗದಗ | -- | -- | -- |
| 22. | ಹಾವೇರಿ | -- | -- | -- |
| 23. | ಉತ್ತರಕನ್ನಡ | 01 | -- | 1 |
| 24. | ಗುಲ್ಬರ್ಗಾ | 02 | -- | 2 |
| 25. | ಬಳ್ಳಾರಿ | 03 | -- | 3 |
| 26. | ರಾಯಚೂರು | -- | -- | -- |
| 27. | ಕೊಪ್ಪಳ | -- | -- | -- |
| 28. | ಬೀದರ್ | 03 | -- | 3 |
| | **ಒಟ್ಟು** | **42** | **01** | **43** |

**ರಾಜ್ಯದಲ್ಲಿ ಕೊಳವೆ ಬಾವಿಗಳ ದುರಸ್ತಿ**

680 ( 1108) ಶ್ರೀ ಆತ್ಮಾನಂದ ಎಂ. ಎಸ್. (ಮಂಡ್ಯ): ಮಾನ್ಯ ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವವರೆ?

ಅ) ರಾಜ್ಯದಲ್ಲಿ ಬೋರ್‌ವೆಲ್ಸ್ ದುರಸ್ತಿ ಕಾಮಗಾರಿ ಗಳನ್ನು ಜಿಲ್ಲಾಪಂಚಾಯತ್‌ನಿಂದ ತಾಲ್ಲೂಕು ಪಂಚಾಯತಿಗೆ ವರ್ಗಾಯಿಸಲಾಗಿದೆಯೇ;

ಆ) ತಾಲ್ಲುಕುಪಂಚಾಯತಿ ಬೋರ್‌ವೆಲ್ ದುರಸ್ತಿ ಕಾಮಗಾರಿಗಳನ್ನು ಸಮರ್ಪಕವಾಗಿ ನರ್ವಹಿಸಲು ಶಕ್ಯವಾಗದೇ ಇರುವುದನ್ನು ಸರ್ಕಾರವು ಮನಗಂಡಿದೆಯೇ

ಇ) ಹಾಗಿದ್ದಲ್ಲಿ ಸರ್ಕಾರವು ಬೋರ್‌ವೆಲ್ಸ್ ದುರಸ್ತಿ ಕಾಮಗಾರಿಗಳನ್ನು ಸಮರ್ಪಕವಾಗಿ ಕೈಗೊಳ್ಳಲು ಯಾವ ವ್ಯವಸ್ಥೆ ಮಾಡುತ್ತದೆ?

ಶ್ರೀ ಎಂ. ವೈ. ಘೋರ್ಪಡೆ ( ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಸಚಿವರು)

ಅ) ಹೌದು

ಆ) ಕೆಲವು ತಾಲ್ಲೂಕು ಪಂಚಾಯತ್‌ಗಳಲ್ಲಿ ಕೊಳವೆ ಬಾವಿಗಳ ದುರಸ್ತಿ ಕಾಮಗಾರಿಗಳನ್ನು ಸಮರ್ಪಕವಾಗಿ ನಿರ್ವಹಿಸುವಲ್ಲಿ ಸ್ವಲ್ಪಮಟ್ಟಿಗೆ ಸಮಸ್ಯೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆ .

ಇ) ಯಾವುದೇ ತಾಲ್ಲೂಕು ಪಂಚಾಯತಿಯು ಕೊಳವೆ ಬಾವಿಗಳ ನಿರ್ವಹಣೆಯನ್ನು ಸಮರ್ಪಕವಾಗಿ ನಿರ್ವಹಿಸುವಲ್ಲಿ ವಿಫಲವಾದರೆ, ಜಿಲ್ಲಾ ಪಂಚಾಯತಿಯು ಕೂಡಲೇ ಕೊಳವೆ ಬಾವಿಗಳ ನಿರ್ವಹಣೆಯನ್ನು ದುರಸ್ತಿ ಕೆಲಸಗಳನ್ನು ಸದರಿ, ತಾಲ್ಲೂಕು ಪಂಚಾಯತ್ ಪರವಾಗಿ ಜಿಲ್ಲಾ ಪಂಚಾಯತ್ ಇಂಜಿನಿಯರಿಂಗ್ ವಿಭಾಗದಿಂದ ಮಾಡಿಸಿ ಇದಕ್ಕೆ ತಗಲುವ ವೆಚ್ಚವನ್ನು ತಾಲ್ಲೂಕು ಪಂಚಾಯತ್‌ಗೆ ಹಂಚಿಕೆಯಾದ ಅನುದಾನದಿಂದ ವಸೂಲಿ ಮಾಡಿ; ಕಡಿತಗೊಳಿಸಿ ಜಿಲ್ಲಾ ಪಂಚಾಯತ್ ಇಂಜಿನಿಯರಿಂಗ್ ವಿಭಾಗಕ್ಕೆ ನೀಡಲು ನಿರ್ದೇಶಿಸಲಾಗಿದೆ.

**ಕೃಷ್ಣ ಮೇಲ್ದಂಡೆ ಯೋಜನೆಯಡಿ ಬಸವನಬಾಗೇವಾಡಿ ಕ್ಷೇತ್ರದಲ್ಲಿ ಪುನರ್ವಸತಿ ಪ್ರದೇಶದಲ್ಲಿ ಶಾಲಾ ಕಾಲೇಜು ತೆರೆಯುವುದು.**

686 ( 1116) ಶ್ರೀ ಬೆಳ್ಳುಬ್ಬಿ ಸಂಗಪ್ಪ ಕಲ್ಲಪ್ಪ ( ಬಸವನ ಬಾಗೇವಾಡಿ): ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೃಷ್ಣಾ ಮೇಲ್ದಂಡೆ ಯೋಜನೆಯಡಿ ಮುಳುಗಡೆಯಾದ ಪ್ರದೇಶ ವ್ಯಾಪ್ತಿಯ ಬಸವನ ಬಾಗೇವಾಡಿ ಮತ ಕ್ಷೇತ್ರದಲ್ಲಿರುವ ಪುನರ್ ವಸತಿ ಕೇಂದ್ರಗಳಲ್ಲಿ ಬೇಡಿಕೆ ಪ್ರಕಾರ ಪದವಿ ಕಾಲೇಜು, ಟಿಸಿಹೆಚ್. ಕಾಲೇಜು, ಪ್ರೌಢ ಶಾಲೆಗಳನ್ನು ಅಗತ್ಯಕ್ಕನುಸಾರವಾಗಿ ತೆರೆಯಲು ಸರ್ಕಾರ ಉದ್ದೇಶಿಸಿದೆಯೆ?

ಆ) ಹಾಗಿದ್ದಲ್ಲಿ ಈ ಬೇಡಿಕೆಗಳನ್ನು ಎಂದು ಪೂರ್ಣಗೊಳಿಸಲಾಗುವುದು?

ಶ್ರೀ ಹೆಚ್.ವಿಶ್ವನಾಥ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು):

ಅ) ಕೃಷ್ಣಾ ಮೇಲ್ದಂಡೆ ಯೋಜನೆಯಡಿ ಮುಳುಗಡೆಯಾದ ಪ್ರದೇಶ ವ್ಯಾಪ್ತಿಯಲ್ಲಿ ಬರುವ ಪ್ರದೇಶಗಳಲ್ಲಿ 2000-2001 ನೇ ಸಾಲಿನಲ್ಲಿ 13 ಸರ್ಕಾರಿ ಪ್ರೌಢ ಶಾಲೆಗಳನ್ನು ತೆರೆದಿದೆ. ಬಸವನ ಬಾಗೇವಾಡಿ ಮತ ಕ್ಷೇತ್ರದಲ್ಲಿರುವ ಪುನರ್ ವಸತಿ ಕೇಂದ್ರಗಳಲ್ಲಿ ಅಗತ್ಯತೆಗೆ ಅನುಸಾರವಾಗಿ ಸರ್ಕಾರಿ ಪ್ರೌಢ ಶಾಲೆಗಳನ್ನು ತೆರೆಯುವ ವಿಚಾರ ಸರ್ಕಾರದ ಪರಿಶೀಲನೆಯಲ್ಲಿದೆ. ಹೊಸ ಶಿಕ್ಷಕರ ತರಬೇತಿ ಸಂಸ್ಥೆಯ ಮಂಜೂರಾತಿ ಕುರಿತಂತೆ ಸರ್ಕಾರದ ವಿಷೇದ ಜಾರಿಯಲ್ಲಿರುತ್ತದೆ. ಬಸವನ ಬಾಗೇವಾಡಿ ಮತ ಕ್ಷೇತ್ರದಲ್ಲಿ ಯಾವುದೇ ಸರ್ಕಾರಿ ಕಾಲೇಜನ್ನಾಗಲೀ ಅಥವಾ ಖಾಸಗೀ ಕಾಲೇಜನ್ನಾಗಲೀ ಸ್ಥಾಪಿಸಲು ಯಾವುದೇ ಬೇಡಿಕೆ ಸರ್ಕಾರದ ಮುಂದೆ ಬಂದಿರುವುದಿಲ್ಲ.

**ರಾಜ್ಯದಲ್ಲಿರುವ ನಿರುದ್ಯೋಗಿ ಚಿತ್ರಕಲಾ ಶಿಕ್ಷಕರುಗಳು**

687 ( 1117) ಶ್ರೀ ಬೆಳ್ಳುಬ್ಬಿ ಸಂಗಪ್ಪ ಕಲ್ಲಪ್ಪ ( ಬಸವನ ಬಾಗೇವಾಡಿ): ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವವರೆ?

1. ರಾಜ್ಯದಲ್ಲಿರುವ ನಿರುದ್ಯೋಗಿ ಚಿತ್ರಕಲಾ ಸಂಗೀತ, ಶಿಕ್ಷಕ ಹಾಗೂ ದೈಹಿಕ ಶಿಕ್ಷಕರುಗಳ ಸಂಖ್ಯೆ ಎಷ್ಟು? ಜಿಲ್ಲಾವಾರು ವಿವರ ನೀಡುವುದು.

2. ರಾಜ್ಯದಲ್ಲಿ ಚಿತ್ರಕಲಾ, ಸಂಗೀತ ಶಿಕ್ಷಕ ಹಾಗೂ ದೈಹಿಕ ಶಿಕ್ಷಣದಲ್ಲಿ ತರಬೇತಿ ಪಡೆದು ಉದ್ಯೋಗವಿಲ್ಲದೆ ಇರುವ ಶಿಕ್ಷಕರನ್ನು ನೇಮಕಾತಿ ಮಾಡಲು ಸರ್ಕಾರ ಉದ್ದೇಶಿಸಿದೆಯೇ?